ಶ್ರೀಮತಿ ಮೋಟಮ್ಮ : ಹಾಸ್ಟೆಲ್ ಕಟ್ಟಡಗಳ ಪ್ರಶ್ನೆ ಎಲ್ಲಾ ಕಾಲಕ್ಕೂ ಎಲ್ಲಾ ಜಿಲ್ಲೆಗಳಿಗೂ ಬರುತ್ತದೆ.

ಅಧ್ಯಕ್ಷರು : ಆದರೂ ವಿಶೇಷವಾದ ಕಳಕಳಿಯಿಂದ ನಿಮಗೆ ಉತ್ತರ ಕೊಡುತ್ತಾರೆ.

ಶ್ರೀಮತಿ ಮೋಟಮ್ಮ : ಹರಪನಹಳ್ಳಿಗೆ 1984ನೇ ಇಸವಿಯಲ್ಲಿ ಹಾಸ್ಟೆಲ್ ಕಟ್ಟಡಕ್ಕೆ ಇವರು ಸ್ಯಾಂಕ್ಷನ್ ಕೊಟ್ಟಿರುವುದು. ಇನ್ನೂ ಕೆಲಸ ಆಗಿಲ್ಲ. ಇವತ್ತು ಇವರು 91ನೇ ಇಸವಿಯಲ್ಲಿದ್ದಾರೆ. ಹಾಸ್ಟೆಲ್ ಮಕ್ಕಳ ಗತಿ ಏನಾಗಬೇಕು?

ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಹಾಸ್ಟೆಲ್ ಪ್ರಾಬ್ಲಮ್ಸ್ ಎಷ್ಟೆಂದು ತಮಗೆ ಗೊತ್ತಿದೆ. ಏಕೆಂದರ, ನಮಗೆ ಸ್ವಂತ ಬಿಲ್ಡಿಂಗ್ಸ್ ಇಲ್ಲ. ಆದ ಕಾರಣ ರೆಂಟೆಡ್ ಬಿಲ್ಡಿಂಗ್‌ಗಳನ್ನು ತೆಗೆದುಕೊಳ್ಳುತ್ತಾರೆ. ಇಂತಹ ಹಾಸ್ಟೆಲ್ ಬಿಲ್ಡಿಂಗ್ಸ್ 15-20 ವರ್ಷಗಳಿಂದ ನಮ್ಮ ಹತ್ತಿರ ಇದೆ. ಬೇಕಾದರೆ ತಾವು ಒಮ್ಮೆ ಯಾವಾಗಲಾದರೂ ವಿಸಿಟ್ ಮಾಡಿ ಆ ಹಾಸ್ಟೆಲ್‌ಗಳಲ್ಲಿ ಏನೂ ಇರುವುದಿಲ್ಲ. ಲ್ಯಾವೆಟ್ರಿಗಳು ಇರುವುದಿಲ್ಲ. ಬಾತ್ ರೂಮ್ಸ್ ಇರುವುದಿಲ್ಲ, ರೋಡ್‌ನಲ್ಲಿ ಸ್ನಾನ ಮಾಡಿಕೊಳ್ಳುವ ಪರಿಸ್ಥಿತಿ ಇದೆ. ಈಗ್ಗೆ 6 ತಿಂಗಳು ಅಥವಾ 1 ವರ್ಷದ ಮೊದಲು ನಾವು ಒಂದು ಪ್ರೋಗ್ರಾಮ್ ಹಾಕಿಕೊಂಡಿದ್ದೇವೆ. ರೆನೋವೇಷನ್ ಮಾಡಬೇಕೆಂದು ಇದರಲ್ಲಿ ಇದೆ. ಲೈಬ್ರರಿ ಫೆಸಿಲಿಟಿ ವಾಟರ್ ಫೆಸಿಲಿಟಿ ಮುಂತಾದವುಗಳನ್ನು ಒಂದೊಂದಾಗಿ ಕೊಟ್ಟು ಸುಧಾರಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಮೋಟಮ್ಮನವರಿಗೆ ಎರಡು ಹಾಸ್ಟೆಲ್‌ಗಳನ್ನು ಕೊಟ್ಟಿದ್ದೇವೆ. ಒಂದು ಬಿ.ಸಿ.ಎಂ. ಹಾಸ್ಟೆಲ್, ಒಂದು ಎಸ್.ಸಿ. ಹಾಸ್ಟೆಲ್.

ಅಧ್ಯಕ್ಷರು : ಹೊಸ ಹಾಸ್ಟೆಲ್‌ಗಳನ್ನು ಕೊಡುವುದಕ್ಕೆ ಮೊದಲು ಇರುವ ಹಾಸ್ಟೆಲ್‌ಗಳ ಬಿಲ್ಡಿಂಗ್‌ಗಳನ್ನು ಸುಧಾರಣೆ ಮಾಡಿ. ಆಮೇಲೆ ಹೊಸ ಹಾಸ್ಟೆಲ್‌ಗಳನ್ನು ಕೊಡಿ.

ಶ್ರೀ ಬಿ. ಶಿವಣ್ಣ : ರಿಪೇರಿ ಮಾಡುತ್ತಿದ್ದೇವೆ.

ಮಡಿಕೇರಿಯ ಜನರಲ್ ಆಸ್ಪತ್ರೆಗೆ ವೆಚ್ಚವಾದ ಹಣ

2608-ಶ್ರೀಮತಿ ಸುಮಾ ವಸಂತ(ವಿರಾಜ ಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಿಕೇರಿ ನಗರದ ಜನರಲ್ ಆಸ್ಪತ್ರೆ ಕಟ್ಟಡದ ಕೆಲಸಕ್ಕೆ 1989-90, 1990-91ನೇ ಸಾಲಿನಲ್ಲಿ ಮಂಜೂರಾದ ಹಾಗೂ ವೆಚ್ಚವಾದ ಮೊತ್ತವೆಷ್ಟು?

ಆ) ಈ ಆಸ್ಪತ್ರೆ ಕಟ್ಟಡದ ಕೆಲಸ ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣವೇನು?

ಇ) ಕಟ್ಟಡದ ಕೆಲಸ ಪೂರ್ತಿಯಾಗಿ ರೋಗಿಗಳಿಗೆ ಅನುಕೂಲವಾಗಲು ಇನ್ನು ಎಷ್ಟು ವರ್ಷಗಳು ಬೇಕಾಗುತ್ತದೆ.?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1989-90 ಸಾಲಿನಲ್ಲಿ 43,000 ರೂ. ಗಳು ಹಾಗೂ 1990-91ನೇ ಸಾಲಿಗೆ 4.00 ಲಕ್ಷ ರೂ.ಗಳನ್ನು ಈ ಕಾಮಗಾರಿಗೆ ಮಂಜೂರು ಮಾಡಿದ್ದು ಆ ವರ್ಷಗಳಲ್ಲಿ ಯಾವುದೇ ವೆಚ್ಚವಾಗಿರುವುದಿಲ್ಲ.

ಆ) ಈವರೆಗೂ ಸದರಿ ಆಸ್ಪತ್ರೆಯ ಒ.ಪಿ.ಡಿ. ವಿಭಾಗದ ಕಾಮಗ್ತಾರಿ ಮುಗಿದಿದ್ದು 1990-91ನೇ ಸಾಲಿನಲ್ಲಿ 4.00 ಲಕ್ಷ ರೂ.ಗಳ ಅನುದಾನ ಒದಗಿಸಿದ್ದಾಗ್ಯೂ ಸಹ ಲೋಕೋಪಯೋಗಿ ಇಲಾಖೆಯಿಂದ ಮುಂದಿನ ಹಂತಗಳ ಕಾಮಗಾರಿಗೆ ಇದುವರೆವಿಗೂ ಯಾವುದೇ ಪ್ರಸ್ತಾವನೆ ಆಡಳಿತ ಮಂಜೂರಾತಿಗಾಗಿ ಬಂದಿರುವುದಿಲ್ಲ.

ಇ) ಮುಂಬರುವ ವರ್ಷಗಳಲ್ಲಿ ಮುಂದಿನ ಹಂತದ ಕಾಮಗಾರಿಗಳನ್ನು ಕೈಗೊಂಡು, ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀಮತಿ ಸುಮಾ ವಸಂತ್ : ಸನ್ಮಾನ್ಯ ಅಧ್ಯಕ್ಷರೆ, ಮಡಿಕೇರಿ ನಗರದ ಜನರಲ್ ಆಸ್ಪತ್ರೆಯ ಕಟ್ಟಡದ ಕೆಲಸಕ್ಕೆ 1990-91ನೇ ಸಾಲಿನಲ್ಲಿ ಏನು ಹಣ ಬಿಡುಗಡೆ ಮಾಡಿದ್ದಾರೆ, ಅದು ಇನ್ನೂ ಖರ್ಚಾಗಲಿಲ್ಲ. ವೆಚ್ಚವಾಗದೆ ಹಾಗೆಯೇ ಉಳಿದಿದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಏಕೆ ಇಷ್ಟು ನಿರ್ಲಕ್ಷ್ಯವೆಂದು ಕೇಳುತ್ತಿದ್ದೇನೆ. ಲೋಕೋಪಯೋಗಿ ಇಲಾಖೆಯಿಂದ ಮುಂದಿನ ಹಂತಗಳಿಗೆ ಕಾಮಗಾರಿಗೆ ಇದುವರೆವಿಗೂ ಯಾವುದೇ ಪ್ರಸ್ತಾವನೆ ಆಡಳಿತ ಮಂಜೂರಾತಿಗಾಗಿ ಬಂದಿರುವುದಿಲ್ಲವೆಂದು ಹೇಳಿದಿರಿ. ಆರೋಗ್ಯ ಇಲಾಖೆಯವರಾದರೂ ಇದರ ಬಗ್ಗೆ ಗಮನಹರಿಸಬಹುದಿತ್ತಲ್ಲ? ಇಡೀ ಇಲಾಖೆ ಬೇಜವಾಬ್ದಾರಿತನದಿಂದ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಮತ್ತೆ ಈ ಕೆಲಸ ಯಾವಾಗ ಪ್ರಾರಂಭವಾಗಿದೆ ಮತ್ತು ಇದನ್ನು ಎಷ್ಟು ವರ್ಷದಲ್ಲಿ ಮುಗಿಸಿಬಿಡುತ್ತಾರೆಂದು ಕೇಳುತ್ತಿದ್ದೇನೆ.

ಶ್ರೀ ಜಿ.ಪುಟ್ಟಸ್ವಾಮಿ ಗೌಡ : ಸನ್ಮಾನ್ಯ ಅಧ್ಯಕ್ಷರೇ, ಈ ಇಲಾಖೆ ಬೇಜವಾಬ್ದಾರಿಯಿಂದ ಕೆಲಸಮಾಡುತ್ತಿಲ್ಲ. 1989ರಲ್ಲಿ 37 ಲಕ್ಷ ರೂ.ಗಳನ್ನು ಖರ್ಚು ಮಾಡಿ ಒ.ಪಿ.ಡಿ. ಬ್ಲಾಕ್‌ನ್ನು ಕಟ್ಟಿ ಈಗಾಗಲೇ ಉಪಯೋಗಕ್ಕೆ ಬಿಟ್ಟುಕೊಡಲಾಗಿದೆ. 1990-91ರಲ್ಲಿ ಅದರ ಪಕ್ಕದಲ್ಲಿ ಅನೆಕ್ಸರ್ ಕಟ್ಟುವುದಕ್ಕೆ 4 ರೂಪಾಯಿಗಳ ಬಜೆಟ್ ಪ್ರಾವಿಷನ್ ಮಾಡಿದ್ದರು. ಆದರೆ ಅದಕ್ಕೆ ಲೋಕೋಪಯೋಗಿ ಇಲಾಖೆಯವರು ಆರ್ಕಿಟೆಕ್ಟರ್ ಕಡೆಯಿಂದ ಅಂತಿಮವಾದ ಯೋಜನೆ ಬರಲಿಲ್ಲವೆಂದು ಆ ಹಣವನ್ನು ಆ ವರ್ಷ ಖರ್ಚು ಮಾಡುವುದಕ್ಕಾಗಲಿಲ್ಲ. 1990Ë91ರಲ್ಲಿ ಇದಕ್ಕೆ ಯಾವ ಹಣವನ್ನು ಬಜೆಟ್‌ನಲ್ಲಿ ಇಡಲಿಲ್ಲ. ಮುಂದಿನ ವರ್ಷ ಆ ಕಾರ್ಯವನ್ನು ಪೂರ್ತಿ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಸುಮಾ ವಸಂತ್ : ಆದಷ್ಟು ಬೇಗ ಮುಗಿಸಿ ಕೊಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ : ಈ ಹಾಸ್ಪಿಟಲಿನ ಹಳೆಯ ಕಟ್ಟಡವನ್ನು ಡೆಮಾಲಿಷ್ ಮಾಡಿ ಹೊಸ ಕಟ್ಟಡವನ್ನು ಕಟ್ಟುತ್ತಿರುವುದು. ಇದು 400 ಬೆಡ್ಸ್ ಕಟ್ಟಡ. ಫಾರ್ಮರ್ ಪ್ರೆಸಿಡೆಂಟ್ ಶ್ರೀ ಸಂಜೀವರೆಡ್ಡಿಯವರು 1981ನೇ ಇಸವಿಯಲ್ಲಿ ಫೌಂಡೇಷನ್ ಸ್ಟೋನ್ ಹಾಕಿದಾಗ ಅದರ ಎಸ್ಟಿಮೇಟ್ 1 ಕೋಟಿ 40 ಲಕ್ಷ ರೂಪಾಯಿಗಳದಾಗಿತ್ತು. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, 400 ಬೆಡ್ಸ್ ಇರತಕ್ಕಂಥ ಹಾಸ್ಪೆಲ್‌ನಲ್ಲಿ 200 ಜನ ಉಳಿದುಕೊಳ್ಳುವುದಕ್ಕೆ ಸ್ಥಳ ಇಲ್ಲ. ಸುಮಾರು ವರ್ಷಗಳ ಹಿಂದೆ ಹಣ ಬಿಡುಗಡೆ ಮಾಡಿದರೂ ಸಹಿತ ಬರೀ ಒ.ಪಿ.ಡಿ. ಬ್ಲಾಕನ್ನು ಮಾತ್ರ ಮಾಡಿದ್ದಾರೆ. ಈಗ ನಮಗೆ ವಾರ್ಡ್ ಆಗಬೇಕು, ಸ್ಪೆಷಲ್ ಸ್ಪೇ ರೂಮ್ಸ್ ಆಗಬೇಕು. ಈ ವರ್ಷ ಕಡೇ ಪಕ್ಷ 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಅಧ್ಯಕ್ಷರೇ, ಈ ವರ್ಷದ ಆಯವ್ಯಯದಲ್ಲಿ ಇಡೀ ರಾಜ್ಯದಲ್ಲಿ ಕಟ್ಟಡಗಳ ರಿಪೇರಿಗಾಗಿ ಮೀಸಲಾಗಿ ಇಟ್ಟಿರುವುದು 80 ಲಕ್ಷ ರೂಪಾಯಿಗಳು. ಮಡಿಕೇರಿ ಆಸ್ಪತ್ರೆಗೇ 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ರಾಜ್ಯದ ಇತರ ಕಡೆಯ ಪರಿಸ್ಥಿತಿ ಏನೆಂದು ನಾನು ವಿವರಿಸಬೇಕಾದುದಿಲ್ಲವೆಂದು

ಕಾಣುತ್ತದೆ. ಇವತ್ತು ನಕ್ಷೆಯ ಪ್ರಕಾರ ಮಡಿಕೇರಿ ಆಸ್ಪತ್ರೆಯನ್ನು ಪೂರ್ತಿ ಮಾಡಬೇಕಾದರೆ ಎರಡು ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಅಷ್ಟೊಂದು ಭಾರಿ ಪ್ರಮಾಣದ ಹಣವನ್ನು ಸರ್ಕಾರದಿಂದ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಆ ಕಾರಣದಿಂದ ಈ ಸಾರಿಯ ಆಯವ್ಯಯದಲ್ಲಿ ಅದನ್ನು ಸೇರಿಸಲಿಲ್ಲ. ಮುಂದಿನ ಬಜೆಟ್‌ಗಾದರೂ ಸ್ವಲ್ಪ ಮಟ್ಟಿಗೆ ಆರ್ಥಿಕ ಇತಿಮಿತಿಯೊಳಗೆ ಹಣ ಕೊಡುವಂಥ ಕೆಲಸ ಮಾಡತಕ್ಕಂಥಾದ್ದಕ್ಕೆ ಪ್ರಯತ್ನ ಮಾಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯ ವೈದ್ಯಾಧಿಕಾರಿಗಳ ಸಂಖ್ಯೆ

2388 - ಶ್ರೀ ಆರ್. ವಿ. ದೇಶಪಾಂಡೆ ; ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ವೈದ್ಯಾಧಿಕಾರಿಗಳು ಹಾಗೂ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿದೆ. ಹಾಗೂ ಎಷ್ಟು ಹುದ್ದೆಗಳು ಖಾಲಿ ಇದೆ? (ವಿವರಗಳನ್ನು ಒದಗಿಸುವುದು)

ಇ) ಎಂದಿನಿಂದ ಈ ಹುದ್ದೆಗಳು ಖಾಲಿ ಇವೆ?

ಈ) ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ?

ಉ) ಹಾಗಿದ್ದಲ್ಲಿ ಸರ್ಕಾರ ಖಾಲಿ ಇರುವ ಮೇಲ್ಕಂಡ ಹುದ್ದೆಗಳನ್ನು ತುಂಬಲು ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪುರುಷ ವೈದ್ಯರು 106

ಮಹಿಳಾ ವೈದ್ಯರು 20

ಒಟ್ಟು **126**

ಆ) ಈ ಪೈಕಿ 107 ಹುದ್ದೆಗಳು ಭರ್ತಿಯಾಗಿದೆ. ಹಾಗೂ 19 ಹುದ್ದೆಗಳು ಖಾಲಿ ಇವೆ. (ವಿವರಗಳ ಪಟ್ಟ ಲಗತ್ತಿಸಲಾಗಿದೆ)

ಇ) 1991ರ ಸಾರ್ವತ್ರಿಕ ಚುನಾವಣೆ ಹಾಗೂ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ತೆರಳಿರುವುದರಿಂದ ವಿವಿಧ ದಿನಾಂಕಗಳಿಂದ ಈ ಹುದ್ದೆಗಳು ಖಾಲಿಯಾಗಿವೆ.

ಈ) ಸಾರ್ವಜನಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು ಖಾಲಿ ಇರುವ ಸ್ಥಳಗಳಿಗೆ ಹತ್ತಿರದ ಆರೋಗ್ಯ ಕೇಂದ್ರಗಳ ವೈದ್ಯರುಗಳಿಗೆ ಹೆಚ್ಚುವರಿ ಕೆಲಸ ನಿರ್ವಹಿಸಲು ಸೂಚಿಸಿರುತ್ತದೆ. ಸ್ನಾತಕೋತ್ತರ ವಿದ್ಯಾಭ್ಯಾಸದಿಂದ ಹಿಂದಿರುಗುವ ವೈದ್ಯಾಧಿಕಾರಿಗಳಿಗೆ ಹಾಗೂ ಲೋಕ ಸೇವಾ ಆಯೋಗದಿಂದ ಆಯ್ಕೆಯಾಗಿರುವ ಹೆಚ್ಚುವರಿ ಪಟ್ಟಿಯಲ್ಲಿರುವ ವೈದ್ಯರುಗಳಿಗೆ ನೇಮಕಾತಿ ನೀಡುವವರೆಗೆ ಖಾಲಿ ಇರುವ ಹುದ್ದೆಗಳನ್ನು ತುಂಬಲು ಪರಿಗಣಿಸಲಾಗುವುದು.